## 12

## ಸುತ್ತಮುತ್ತಲೂ ಕಣ್ಣು ಕತ್ತಲು...

ಭಾರತದ ನಗರಗಳು ಗ್ಯಾಸ್ ಚೇಂಬರ್‌ಗಳ ಸ್ವರೂಪ ಪಡೆದುಕೊಳ್ಳುತ್ತಿರುವುದನ್ನು 2022ರ ಸಾಲಿನ 'ಜಾಗತಿಕ ವಾಯು ಗುಣಮಟ್ಟ ವರದಿ' ಒತ್ತಿಹೇಳುತ್ತಿದೆ. ವಿಶ್ವದ 'ಟಾಪ್20' ವಾಯುಮಾಲಿನ್ಯಪೀಡಿತ ನಗರಗಳ ಪಟ್ಟಿಯಲ್ಲಿ ಭಾರತದ ದೆಹಲಿ, ಕೋಲ್ಕತ್ತ ಹಾಗೂ ಮುಂಬೈ ಸ್ಥಾನಪಡೆದಿವೆ. ಈ ಪಟ್ಟಿಯಲ್ಲಿ ವಿಶ್ವದ ಬೇರೆ ಯಾವುದೇ ದೇಶದ ಒಂದಕ್ಕಿಂತ ಹೆಚ್ಚು ನಗರ ಇಲ್ಲ ಎನ್ನುವುದು ಗಮನಾರ್ಹ. ಮಹಾನಗರಗಳು ಮಾತ್ರವಲ್ಲ, ಭಾರತದಲ್ಲಿನ ಕಾನ್ಪುರ, ರೋಹ್ಟಕ್‌ನಂಥ ಸಣ್ಣ ನಗರಗಳು ಕೂಡ ಕುದಿಕುಲುಮೆಗಳಾಗಿವೆ ಎಂದು ವರದಿ ಹೇಳಿದೆ.

ವಾಯುಮಾಲಿನ್ಯದ ಜಾಗತಿಕ ಪರಿಣಾಮಗಳನ್ನು ವಿಶ್ಲೇಷಿಸುವ 'ಹೆಲ್ತ್ ಎಫೆಕ್ಟ್ ಇನ್‌ಸ್ಟಿಟ್ಯೂಟ್'ನ (ಎಚ್‌ಇಐ) 2019ರ ವರದಿ, ಭಾರತದ ಬಹುದೊಡ್ಡ ಸಂಕಟವಾಗಿ ವಾಯುಮಾಲಿನ್ಯ ಪರಿಣಮಿಸಿರುವುದಾಗಿ ಹೇಳಿತ್ತು. ವಾಯುಮಾಲಿನ್ಯದ ಪರಿಣಾಮದಿಂದಾಗಿ 2019ರಲ್ಲಿ 1.16 ಲಕ್ಷ ನವಜಾತ ಶಿಶುಗಳು ಭಾರತದಲ್ಲಿ ಮರಣ ಹೊಂದಿರುವುದನ್ನು 'ಎಚ್‌ಇಐ' ಗುರ್ತಿಸಿತ್ತು. ಮಕ್ಕಳ ಮೆದುಳು, ಶ್ವಾಸಕೋಶ ಸೇರಿದಂತೆ ವಿವಿಧ ಅಂಗಗಳ ಮೇಲೆ ಕಲುಷಿತ ಗಾಳಿ ಪರಿಣಾಮ ಬೀರುತ್ತಿದ್ದು, ಎಳೆಯರ ದೈಹಿಕ ಹಾಗೂ ಮಾನಸಿಕ ಆರೋಗ್ಯ ಕುಂಠಿತಗೊಳ್ಳುತ್ತಿರುವುದಾಗಿ ವರದಿ ಎಚ್ಚರಿಸಿತ್ತು. 2019ರಲ್ಲಿ ವಾಯುಮಾಲಿನ್ಯದಿಂದಾಗಿ ಸುಮಾರು 16 ಲಕ್ಷ ಸಾವು ಹಾಗೂ ಜಲಮಾಲಿನ್ಯದಿಂದಾಗಿ 5 ಲಕ್ಷ ಸಾವು ಭಾರತದಲ್ಲಿ ಸಂಭವಿಸಿವೆ ಎಂದು 'ಲಾನ್ಸೆಟ್' ವರದಿ ಅಂದಾಜು ಮಾಡಿದೆ. ಉಸಿರಾಟ ಸಂಬಂಧಿ ಸಮಸ್ಯೆಗಳಿಂದ ಬಳಲುವವರ ಸಂಖ್ಯೆಯಲ್ಲೂ ಭಾರತ ಮುಂಚೂಣಿಯಲ್ಲಿದೆ.

ದೇಶದ ನಗರಗಳ ಅನಾರೋಗ್ಯದ ಸಮಸ್ಯೆಯ ಜೊತೆಯಲ್ಲಿಯೇ 2022ರ ಇಡೀ ವರ್ಷ, ಮಳೆಗಾಲದ ರೂಪ ಪಡೆದುಕೊಂಡಿದ್ದನ್ನು ನೆನಪಿಸಿಕೊಳ್ಳಬೇಕು. ಕರ್ನಾಟಕದಲ್ಲೂ ಮಳೆಯ ರುದ್ರರೂಪ ಅನಾವರಣಗೊಂಡಿತು. ಮಳೆಯಿಂದಾಗಿ ಕೆರೆಕಟ್ಟೆಗಳೇನೊ ತುಂಬಿಕೊಂಡಿವೆ. ಆದರೆ, ಕೃಷಿ ಚಟುವಟಿಕೆಗಳನ್ನು ಅತಿವೃಷ್ಟಿ ಅಸ್ತವ್ಯಸ್ತಗೊಳಿಸಿದೆ. ಅಂಕೆಯಿಲ್ಲದೆ ಸುರಿದ ಮಳೆಯಿಂದಾಗಿ ಆಹಾರಕ್ಷಾಮ ತಲೆದೋರುವ ಸಾಧ್ಯತೆಯೂ ಇದೆ. ಈ ಅತಿವೃಷ್ಟಿಯನ್ನು ಕೂಡ ಹವಾಮಾನ ವೈಪರೀತ್ಯದ ಪ್ರತಿಫಲದ ರೂಪದಲ್ಲಿಯೇ ನೋಡಬೇಕಾಗಿದೆ.


ಇದು ಯಮುನಾ...

## 13

## ರಷ್ಯಾ-ಉಕ್ರೇನ್ ಯುದ್ಧದ ಕಾರ್ಮೋಡ

ಉಕ್ರೇನ್ ಮೇಲೆ ರಷ್ಯಾದ ದಾಳಿಯಿಂದಾಗಿ ತಲೆದೋರಿರುವ ಯುದ್ಧ, ಎರಡು ಮಹಾಯುದ್ಧಗಳಿಂದ ಜಗತ್ತು ಪಾಠ ಕಲಿತಿಲ್ಲ ಎನ್ನುವುದರ ನಿದರ್ಶನದಂತಿದೆ. ಮನುಕುಲದ ಶಾಂತಿಗಿಂತಲೂ ಅಧಿಕಾರದ ಮೇಲಾಟಗಳೇ ಹೆಚ್ಚಿನ ಆದ್ಯತೆ ಪಡೆದುಕೊಳ್ಳುವುದಕ್ಕೂ ಈ ಸಂಘರ್ಷ ಉದಾಹರಣೆಯಂತಿದೆ.

1991ರಲ್ಲಿ ಸೋವಿಯತ್ ಒಕ್ಕೂಟ ಪತನಗೊಳ್ಳುವುದರೊಂದಿಗೆ, ಉಕ್ರೇನ್ ಸ್ವತಂತ್ರ ರಾಷ್ಟ್ರವಾದಾಗಿನಿಂದ ಸಂಘರ್ಷ ಬೂದಿಮುಚ್ಚಿದ ಕೆಂಡದಂತೆ ಜೀವಂತವಾಗಿದೆ. ರಷ್ಯಾದ ಸಾಮ್ರಾಜ್ಯಶಾಹಿ ಪರಂಪರೆಯನ್ನು ಧಿಕ್ಕರಿಸಿದ ಉಕ್ರೇನ್ ಯೂರೋಪ್ ದೇಶಗಳೊಂದಿಗೆ ಸ್ನೇಹಸಂಬಂಧ ಹೊಂದಿರುವುದು ರಷ್ಯಾದ ಅಸಹನೆಗೆ ಕಾರಣವಾಗಿದೆ. ಉಕ್ರೇನ್ 'ನ್ಯಾಟೊ' ಸದಸ್ಯತ್ವ ಪಡೆಯಲು ಪ್ರಯತ್ನಿಸುತ್ತಿರುವುದೂ ರಷ್ಯಾದ ನಿದ್ದೆಗೆಡಿಸಿದೆ. ನ್ಯಾಟೊ ದೇಶಗಳ ಬೆಂಬಲದಿಂದ ರಷ್ಯಾದ ಸಾರ್ವಭೌಮತ್ವಕ್ಕೆ ಉಕ್ರೇನ್ ಆತಂಕ ಉಂಟುಮಾಡುತ್ತಿದೆ ಎನ್ನುವ ಆರೋಪದೊಂದಿಗೆ, ರಷ್ಯಾ ದಾಳಿ ನಡೆಸುತ್ತಿದೆ. 2022ರ ಫೆಬ್ರುವರಿಯಿಂದ ರಷ್ಯಾ ಪೂರ್ಣ ಪ್ರಮಾಣದ ದಾಳಿ ಕೈಗೊಂಡಿದ್ದು, ಈ ಯುದ್ಧದಲ್ಲಿ ಉಕ್ರೇನ್‌ನ ನಗರಗಳಲ್ಲಿ ಅಪಾರ ಪ್ರಮಾಣದ ಸಾವು ಸಂಭವಿಸಿದೆ. ಉಕ್ರೇನ್ ಕೂಡ ರಷ್ಯಾಕ್ಕೆ ಪ್ರಬಲ ಸವಾಲು ಒಡ್ಡಿದೆ. ಉಕ್ರೇನ್‌ಗೆ ಆರ್ಥಿಕ ಹಾಗೂ ಶಸ್ತ್ರಾಸ್ತ್ರಗಳ ನೆರವಿಗೆ ಅಮೆರಿಕ ಹಾಗೂ ಇಂಗ್ಲೆಂಡ್ ಬದ್ಧವಾಗಿವೆ. ಇದುವರೆಗಿನ ಸಂಘರ್ಷದಲ್ಲಿ ಕನಿಷ್ಠ 41 ಸಾವಿರ ನಾಗರಿಕರು ಸಾವಿಗೀಡಾಗಿದ್ದು, 54 ಸಾವಿರಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ. 15 ಸಾವಿರಕ್ಕೂ ಹೆಚ್ಚು ಜನ ಕಾಣೆಯಾಗಿದ್ದಾರೆ. 1 ಲಕ್ಷದ 40 ಸಾವಿರಕ್ಕೂ ಹೆಚ್ಚು ಕಟ್ಟಡಗಳು ನಾಮಾವಶೇಷವಾಗಿವೆ ಎಂದು 'ರಾಯಿಟರ್ಸ್' ಸುದ್ದಿಸಂಸ್ಥೆ ಅಂಕಿಅಂಶಗಳು ಹೇಳುತ್ತಿವೆ.

ಉಕ್ರೇನ್‌ನಲ್ಲಿ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದ ಭಾರತೀಯ ವಿದ್ಯಾರ್ಥಿಗಳನ್ನು ಸ್ವದೇಶಕ್ಕೆ ಕರೆತರುವುದು ಭಾರತ ಸರ್ಕಾರಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿತ್ತು. ಸಂರಕ್ಷಣೆಗೆ ಮೊದಲೇ, ಉಕ್ರೇನ್‌ನ ಖಾರ್ಕಿವ್‌ನಲ್ಲಿ ನಡೆದ ರಷ್ಯಾ ಪಡೆಗಳ ಶೆಲ್ ದಾಳಿಗೆ ಸಿಲುಕಿ ಕರ್ನಾಟಕದ ನವೀನ್ ಶೇಖರಪ್ಪ ಗ್ಯಾನಗೌಡರ್ ಸಾವಿಗೀಡಾದರು.

ಉಕ್ರೇನ್‌ನ ರೈಲ್ವೆ ನಿಲ್ದಾಣದಲ್ಲಿ ಬೀಳ್ಕೊಡುಗೆಯ ಸಂಕಟದಲ್ಲಿರುವ ಯುವಜೋಡಿಯ ಈ ಚಿತ್ರ ಅನೇಕ ಕಥೆಗಳನ್ನು ಹೇಳುತ್ತಿದೆ. ರಷ್ಯಾ ವಿರುದ್ಧದ ಸಂಘರ್ಷದಲ್ಲಿ ಉಕ್ರೇನ್‌ನ ಪುರುಷರು ದೇಶದಲ್ಲಿಯೇ ಉಳಿದರೆ, ಮಹಿಳೆಯರು ಮತ್ತು ಮಕ್ಕಳನ್ನು ದೇಶದಿಂದ ಹೊರಗೆ ಕಳಿಸಲಾಗುತ್ತಿದೆ. ಫೋಟೊ: ಎಪಿ/ಪಿಟಿಐ

